# ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗೆ ಅರ್ಜಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮೈಸೂರು ಜಿಲ್ಲೆಯಲ್ಲಿ ಖಾಲಿಯಿರುವ ಅಂಗನವಾಡಿ ಕಾರ್ಯಕರ್ತೆಯರು 68 ಹಾಗೂ ಸಹಾಯಕಿಯರ 251 ಹುದ್ದೆಗೆ ಗೌರವಧನ ಸೇವೆಯ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹೆಣ್ಣು ಮಕ್ಕಳು ಹಾಗೂ ಮಹಿಳಾ ಲಿಂಗತ್ವ ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು https://karnemakaone.kar.nic.in/abcd/ ವೆಬ್ ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನಾಂಕವಾಗಿರುತ್ತದೆ. ಟಿ. ನರಸೀಪುರ ಅಂಗನವಾಡಿ ಕಾರ್ಯಕರ್ತೆ 3 ಹಾಗೂ ಸಹಾಯಕಿಯರ 28 ಹುದ್ದೆಗಳು, ಬಿಳಿಕೆರೆ ಅಂಗನವಾಡಿ ಕಾರ್ಯಕರ್ತೆ 6 ಹಾಗೂ ಸಹಾಯಕಿಯರ 32 ಹುದ್ದೆಗಳು, ನಂಜನಗೂಡು ಅಂಗನವಾಡಿ ಕಾರ್ಯಕರ್ತೆ 10 ಹಾಗೂ ಸಹಾಯಕಿಯರ 31 ಹುದ್ದೆಗಳು, ಮೈಸೂರು ನಗರ ಅಂಗನವಾಡಿ ಕಾರ್ಯಕರ್ತೆ 1 ಹಾಗೂ ಸಹಾಯಕಿಯರ 14 ಹುದ್ದೆಗಳು, ಮೈಸೂರು ಗ್ರಾಮಾಂತರ ಅಂಗನವಾಡಿ ಕಾರ್ಯಕರ್ತೆ 6 ಹಾಗೂ ಸಹಾಯಕಿಯರ 12 ಹುದ್ದೆಗಳು, ಪಿರಿಯಾಪಟ್ಟಣ ಅಂಗನವಾಡಿ ಕಾರ್ಯಕರ್ತೆ 11 ಹಾಗೂ ಸಹಾಯಕಿಯರ 57 ಹುದ್ದೆಗಳು, ಎಚ್.ಡಿ. ಕೋಟೆ ಅಂಗನವಾಡಿ ಕಾರ್ಯಕರ್ತೆ 22 ಹಾಗೂ ಸಹಾಯಕಿಯರ 29 ಹುದ್ದೆಗಳು, ಕೆ. ಆರ್. ನಗರ ಅಂಗನವಾಡಿ ಕಾರ್ಯಕರ್ತೆ 4, ಸಹಾಯಕಿಯರ 22 ಹುದ್ದೆಗಳು, ಹುಣಸೂರು ಅಂಗನವಾಡಿ ಕಾರ್ಯಕರ್ತೆ 5 ಹಾಗೂ ಸಹಾಯಕಿಯರ 26 ಹುದ್ದೆಗಳು ಖಾಲಿ ಇದ್ದು, ಒಟ್ಟು ಅಂಗನವಾಡಿ ಕಾರ್ಯಕರ್ತೆಯರು 68 ಹಾಗೂ ಸಹಾಯಕಿಯರ 251 ಹುದ್ದೆಗಳು ಖಾಲಿಯಿದೆ. ಆನ್ ಲೈನ್ ನಲ್ಲಿ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಅರ್ಜಿಗಳನ್ನು ಭರ್ತಿ ಮಾಡಿ ಅವಶ್ಯಕ ಧೃಢೀಕೃತ ದಾಖಲೆ ಗಳನ್ನು ಸ್ಪಷ್ಟವಾಗಿ ಕಾಣಿಸುವಂತೆ ಸ್ಕ್ಯಾನ್ ಮಾಡಿ ಅರ್ಜಿ ಸಲ್ಲಿಸಬೇಕು. ಅಂಗನವಾಡಿ ಸಹಾಯಕಿ ಹುದ್ದೆಗೆ ಎಸ್‌ಎಸ್‌ಎಲ್ಸಿ ಅಥವಾ ತತ್ಸಮಾನ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಎಸ್‌ಎಸ್‌ಎಲ್ಸಿಯಲ್ಲಿ ಕನ್ನಡಭಾಷೆ ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆಯನ್ನಾಗಿ ಓದಿರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.